ಸಭಾಂಗಣ ಸ್ತಬ್ಧವಾಯಿತು.

* * *

ಲೋಹಿತೇಶ್ವರ ಆಸ್ಪತ್ರೆಯ ಸ್ಪೆಷಲ್ ವಾರ್ಡ್‌ನಲ್ಲಿ ಏಕಾಂಗಿಯಾಗಿ ಮಲಗಿದ್ದ. ನಿತ್ರಾಣ ಕೈಗಳಲ್ಲಿ ಪುಸ್ತಕ ಹಿಡಿಯುವುದೂ ಕಷ್ಟವಾಗುತಿತ್ತು. ಶರೀರದ ಎಲ್ಲ ಪರೀಕ್ಷೆಗಳೂ ನಡೆದು ಕಿಡ್ನಿ, ಲಿವರ್ ಸೋಲುತ್ತಿದೆ. ರಕ್ತನಾಳಗಳಲ್ಲಿ ಮಲ್ಟಿಪಲ್ ಬ್ಲಾಕೇಜ್ ಇದೆ ಅನ್ನುವ ರಿಪೋರ್ಟ್ ಬಂದಿತ್ತು. ಬದುಕಿ ಉಳಿಯಲಾಗದಿದ್ದರೆ ಕೊನೆ ಉಸಿರು ಮುಗಿಯುವವರೆಗೂ ದಿನಕ್ಕೊಂದು ಪುಟವಾದರೂ ಓದಬೇಕೆಂಬ ನಿಯಮವನ್ನು ವ್ರತವನ್ನಾಗಿಸಿಕೊಂಡಿದ್ದ. ಇನ್ನಷ್ಟು ಚೇತರಿಕೆ ಸಿಕ್ಕಿಬಿಟ್ಟರೆ ಬಹು ಮುಖ್ಯವಾದದ್ದು ಬರೆಯುವುದಿತ್ತು. ಗೆಳೆಯ, ಗೆಳತಿಯರು, ಕಂಡರಾಗದಿದ್ದವರು, ಅವನ ತೀಕ್ಷ್ಣತೆಗೆ ಹೆದರಿ ದೂರವಿದ್ದವರು, ಅವನ ಲೇಖನಿಗೆ ಹೆದರಿ ಇವನೊಮ್ಮೆ ನೆಗೆದು ಬಿದ್ದು ಹೋದರೆ ಸಾಕಿತ್ತಪ್ಪಾ ಎಂದು ಶಾಪ ಹಾಕುತ್ತಿದ್ದವರು... ಹೀಗೆ ಎಲ್ಲರೂ ಬಂದು ಮಾತಾಡಿಸಿ ಸಹತಾಪ ಸೂಚಿಸಿ, ಇನ್ನೇನು ಸತ್ತೇಬಿಟ್ಟ ಎಂಬಂತ ಸಂತಾಪದಲ್ಲಿ ತುಸು ಹೊತ್ತು ಅವನ ಮಂಚದ ಪಕ್ಕದಲ್ಲಿ ಮೌನವಾಗಿ ಕುಳಿತು ಎದ್ದು ಹೋಗಿದ್ದರು.



ಆಸ್ಪತ್ರೆ ಸಹವಾಸಕ್ಕೆ ಬಿದ್ದ ಮೇಲೆ ಹಗಲು ರಾತ್ರಿಗಳು ಗೌಣವೆನಿಸತೊಡಗಿತ್ತು ಲೋಹಿತೇಶ್ವರನಿಗೆ. ಯಾವುದೋ ಹೊತ್ತಲ್ಲಿ ಅಮಲಿನಂತಹ ನಿದ್ದೆ. ಮತ್ತೊಮ್ಮೆ ತೂಕಡಿಕೆ. ದಿನಚರಿಯ ಸಂಬಂಧಿಕರ ಹೊರತಾಗಿ ಕಾಣಬೇಕಾದವರೆಲ್ಲ ಬಂದು ಹೋಗಿದ್ದರು. 'ನಾನು ಸಾಯೋದಿಲ್ಲ ಕಣ್ರೋ. ಇವ ನೆಗೆದು ಬಿದ್ದು ಹೋಗ್ತಾನೇನೋ ಅಂತ ಯಾರೂ ಅನ್ಕಳ್ಬೇಡಿ' ಅನ್ನುತ್ತಿದ್ದ ಲೋಹಿತೇಶ್ವರ. ಆದರೆ ಆಳದಲ್ಲಿ ನೋವಿನ ಛಾಯೆ ಇಣುಕುತ್ತಿರುವುದು ಎಲ್ಲರಿಗೂ ಅರಿವಾಗುತ್ತಿತ್ತು. ದಿನದಿಂದ ದಿನಕ್ಕೆ ಪುಸ್ತಕ ಪದೇ ಪದೇ ಕೈ ಜಾರಲು ಹವಣಿಸುತ್ತಿತ್ತು. ಆ ದಿನವೂ ಬೆಳಗ್ಗೆ ಮನೆಯಿಂದ ಬಂದವರು ಆಗಷ್ಟೇ ಹೋಗಿದ್ದರು. ಔಷಧಿ ಇಂಜೆಕ್ಷನ್ ಹಾಕುವ ನರ್ಸಮ್ಮ ಬಂದು ತನ್ನ ಕೆಲಸ ಮುಗಿಸಿ ಹೋಗುವಾಗ ಮಂಚ ಎತ್ತರಿಸಿ ದಿಂಬು ಬೆನ್ನಿಗಿಟ್ಟು ಅವನು ಕೇಳಿದ ಪುಸ್ತಕ ಕೈಗಿಟ್ಟು ಹೋಗಿದ್ದಳು. ಯಾವುದೋ ಹೊತ್ತಿನಲ್ಲಿ ಇನ್ನೇನು ಪುಸ್ತಕ ಜಾರಿಬಿಡುತ್ತದೆ ಅನ್ನುವಾಗ ಯಾರೋ ಆ ಪುಸ್ತಕ ಹಿಡಿದುಕೊಂಡಿದ್ದರು. ಕನ್ನಡಕ ಸರಿಪಡಿಸಿಕೊಂಡು ನೋಡಿದರೆ ರಮಣಿ ನಿಂತಿದ್ದಳು ಅವನೆದುರು. ಅವಳ ಅನಿರೀಕ್ಷಿತ ದರ್ಶನ ಅವನಲ್ಲಿ ಅಡಗಿಸಲಾಗದಂತೆ ಹುಟ್ಟಿಸಿದ ಸಂಭ್ರಮವನ್ನು ಅವಳು ಗುರುತಿಸಿಬಿಟ್ಟಳು. ಅವಳು ಗುರುತಿಸಿದ್ದನ್ನು ಅವನು ಗುರುತಿಸಿದ. ಮಂಚದ ಸಮೀಪ ಸ್ಟೂಲ್ ಎಳೆದು ಕುಳಿತಳು. ಬಹಳ ಹೊತ್ತು ಇಬ್ಬರಲ್ಲೂ ಮೌನ. ಮಂಚದ ಮೇಲಿದ್ದ ಅವನ ಕೈ, ತೊಡೆಗಳ ಮೇಲೆ ವಿರಮಿಸಿದ್ದ ಅವಳ ಕೈಗಳೊಳಗಿನ ಚಡಪಡಿಕೆ ಪರಸ್ಪರರಿಗೆ ತಿಳಿಯುತ್ತಿತ್ತು.

'ಬರ್ತೀರಿ ಅನ್ಕೊಂಡಿರಲಿಲ್ಲ. ಬರಲಿ ಅನ್ನುವ ಆಸೆ ಇತ್ತು'.

'ನಾನೂ ಬರಬೇಕೆಂದುಕೊಂಡಿರಲಿಲ್ಲ. ಆದರೂ ಸಾವಿನ ಮನೆಯೊಳಗೆ ಹೋಗುವೆನೇನೋ ಅಂದುಕೊಂಡವನ ನಿರೀಕ್ಷೆ ಗೊತ್ತಿತ್ತು.'

'ಇನ್ಯಾರು ಬಾಕಿ ಇಲ್ಲ ಬಂದು ಭೇಟಿಯಾಗಲು. ಬಂದರೆ ಹೀಗೆ ಕಡೆಯವಳಾಗಿ ಬರಲಿ ಅಂದುಕೊಂಡಿದ್ದೆ' ಎಂದಿನ ಗಡುಸಿಗೆ ವ್ಯತಿರಿಕ್ತವಾಗಿತ್ತು ಅವನ ಗಂಟಲು.

ಮಂಚದ ಮೇಲೆ ಚಾಚಿದ್ದ ಅವನ ಅಂಗೈ ಮೇಲೆ ತನ್ನ ಅಂಗೈ ಇಟ್ಟ ರಮಣಿ 'ಅದಕ್ಕೇ ಕಡೆಯವಳಾಗಿ ಬಂದೆ' ತುಸು ಬಾಗಿ ಹೇಳಿದಳು. ಇದ್ದಕ್ಕಿದ್ದಂತೆ ಅವನ ತೋಳುಗಳು ಬಲವಾಗಿ ಅವಳನ್ನ ಎಳೆದುಕೊಂಡಿತು. ಅವನ ಅಂದಾಜು ತಪ್ಪಿತ್ತು. ರಮಣಿಯ ಸಮತೋಲನ ತುಸುವು ಅಲುಗಾಡಿಲ್ಲವೆಂಬಂತೆ ದೃಢವಾಗಿ ಕುಳಿತಿದ್ದಳು. ಸಶಬ್ದವಾಗಿ ನಕ್ಕಳು. ಅವನ ಕಣ್ಣುಗಳ ದೃಷ್ಟಿ ಹಿಡಿದಿಡಲು ಪ್ರಯತ್ನಿಸುತ್ತಾ, 'ಲೋಹಿತೇಶ್ವರ, ನಾನು ನಿನ್ನ ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ ನೋಡು' ತಣ್ಣಗೆ ನುಡಿದಳು. ಅವನ ತೋಳುಗಳು ದೊಪ್ಪನೆ ಹಾಸಿಗೆಗುರುಳಿದ್ದವು... ●